# ಗ್ರ್ಯಾಂಡ್ ಮಾಸ್ಟರ್ ವೈಶಾಲಿ




■ ಪ್ರವೀಣ ಕುಲಕರ್ಣಿ

ಭಾರತದ ಮೂರನೇ ಮಹಿಳಾ ಗ್ರ್ಯಾಂಡ್ ಮಾಸ್ಟರ್ ಎಂಬ ಹಿರಿಮೆಗೆ ಪಾತ್ರರಾಗಿರುವ ಆರ್. ವೈಶಾಲಿ ದೇಶದ ಚೆಸ್ ರಂಗದಲ್ಲೀಗ ಸಂಭ್ರಮದ ಅಲೆ ಎಬ್ಬಿಸಿದ್ದಾರೆ. ಸ್ಪೇನ್‌ನಲ್ಲಿ ನಡೆದ ಎಲ್ ಲೊಬ್ರೆಗಟ್ ಟೂರ್ನಿಯಲ್ಲಿ ಅವರು 2500 ರೇಟಿಂಗ್ ದಾಟುವ ಮೂಲಕ ಈ ಸಾಧನೆ ಮಾಡಿದ್ದಾರೆ. ವೈಶಾಲಿ ಅವರಿಗಿಂತ ಮೊದಲು ಗ್ರ್ಯಾಂಡ್ ಮಾಸ್ಟರ್ ಪಟ್ಟಕ್ಕೆ ಏರಿದ ಇತರ ಇಬ್ಬರು ಮಹಿಳಾ ಚೆಸ್ ಪಟುಗಳೆಂದರೆ ಅದು ಕೊನೇರು ಹಂಪಿ ಮತ್ತು ದ್ರೊಣವಲ್ಲಿ ಹಾರಿಕಾ ಮಾತ್ರ. 2011ರಿಂದ ಇದುವರೆಗೆ ದೇಶದ ಒಬ್ಬ ಮಹಿಳೆಯೂ ಈ ಪಟ್ಟಕ್ಕೆ ಏರಿರಲಿಲ್ಲ ಎಂದರೆ ವೈಶಾಲಿ ಅವರ ಸಾಧನೆಯ ಮಹತ್ವ ಎಂತಹದ್ದು ಎನ್ನುವುದು ಅರ್ಥವಾಗುತ್ತದೆ.

ವೈಶಾಲಿ ಅವರ ಸಾಧನೆಯಲ್ಲಿ ಮತ್ತೂ ಒಂದು ವಿಶೇಷವಿದೆ. ಅವರ ತಮ್ಮ ಪ್ರಜ್ಞಾನಂದ ಈ ಮೊದಲೇ ಗ್ರ್ಯಾಂಡ್ ಮಾಸ್ಟರ್ ಆಗಿ ಹೊರಹೊಮ್ಮಿದ್ದರು. ಹೀಗಾಗಿ ಗ್ರ್ಯಾಂಡ್ ಮಾಸ್ಟರ್ ಆದ ವಿಶ್ವದ ಮೊದಲ ಸೋದರ–ಸೋದರಿ ಜೋಡಿ ಎಂಬ ಹಿರಿಮೆಗೂ ಅವರು ಪಾತ್ರರಾಗಿದ್ದಾರೆ. ಅಕ್ಕನ ಚೆಸ್ ಆಟವನ್ನು ನೋಡುತ್ತಾ, ನಂತರ ತಾನೂ ಆ ಗೀಳು ಹಚ್ಚಿಸಿಕೊಂಡಿದ್ದ 'ಪ್ರಗ್ಗು' 12ನೇ ವಯಸ್ಸಿನಲ್ಲೇ ಗ್ರ್ಯಾಂಡ್‌ಮಾಸ್ಟರ್ ಟೈಟಲ್ ಪಡೆದಿದ್ದರು. ಹಾಗೆ ನೋಡಿದರೆ ವೈಶಾಲಿಗೆ ಈ ಪಟ್ಟ ತುಸು ತಡವಾಗಿ ಒಲಿದುಬಂದಿದೆ. ಆದರೆ, ತಮ್ಮನೇ ಮೊದಲು ಈ ಸಾಧನೆ ಮಾಡಿರುವುದು ಅವರಿಗೆ ಖುಷಿ ತಂದಿದೆ.

'ಗ್ರ್ಯಾಂಡ್ ಮಾಸ್ಟರ್‌ಗಳ ಕ್ಲಬ್ ಸೇರಿರುವುದು ನನಗೆ ಸಂತಸ ತಂದಿದೆ. ಚಿಕ್ಕಂದಿನಿಂದಲೇ ನಾನು ಈ ಕ್ಷಣಕ್ಕಾಗಿ ಹಂಬಲಿಸುತ್ತಿದ್ದೆ. ಮೊದಲೇ ಅಲ್ಲಿ ನನ್ನ ತಮ್ಮನಿರುವುದು ನನ್ನ ಖುಷಿಯನ್ನು ಇಮ್ಮಡಿಗೊಳಿಸಿದೆ' ಎನ್ನುತ್ತಾರೆ ವೈಶಾಲಿ. ಚೆನ್ನೈನ ಈ 22ರ ಹರೆಯದ ಹುಡುಗಿಯ ಸಾಧನೆಯಿಂದ ದೇಶದ ಮಹಿಳಾ ಚೆಸ್ ಲೋಕದಲ್ಲೂ ಉತ್ಸಾಹ ಹೆಚ್ಚಿದೆ. 'ಭಾರತದ ಮೂರನೇ ಮಹಿಳಾ ಗ್ರ್ಯಾಂಡ್ ಮಾಸ್ಟರ್ ಈಗ ಸಿಕ್ಕಿದ್ದಾರೆ. ಇದು ಆರಂಭ ಮಾತ್ರ. ಚೆಸ್ ರಂಗದಲ್ಲಿ ದೇಶದ ಭವಿಷ್ಯ ಉಜ್ವಲವಾಗಿದೆ' ಎಂದು ದ್ರೊಣವಲ್ಲಿ ಹಾರಿಕಾ ಸಂತಸ ವ್ಯಕ್ತಪಡಿಸಿದ್ದಾರೆ.

ಚೆನ್ನೈನ ರಮೇಶಬಾಬು ಅವರು ತಮ್ಮ ಇಬ್ಬರೂ ಮಕ್ಕಳಿಗೆ ಚೆಸ್‌ನ ದೀಕ್ಷೆ ಕೊಟ್ಟರು. ಮೊದಲು ವೈಶಾಲಿ ಚೆಸ್ ಬೋರ್ಡ್‌ನ ಹುಚ್ಚು ಹಿಡಿಸಿಕೊಂಡರೆ, ಅಕ್ಕನನ್ನು ಹಿಂಬಾಲಿಸಿದ್ದು ಪ್ರಗ್ಗು. ವಿವಿಧ ವಯೋಮಾನದ ಸ್ಪರ್ಧೆಗಳಿಗೆ ಮಗಳನ್ನು ಕರೆದೊಯ್ಯುತ್ತಿದ್ದ ರಮೇಶಬಾಬು, ಅವಳ ಚೆಸ್ ಕೌಶಲವನ್ನು ಒರೆಗೆ ಹಚ್ಚಿದ್ದರು. ವೈಶಾಲಿ ಒಂದರ ಮೇಲೊಂದರಂತೆ ಪ್ರಶಸ್ತಿಯನ್ನು ಗೆಲ್ಲುತ್ತಲೇ ಹೋದರು. ಪ್ರತಿನಿತ್ಯ 6–7 ಗಂಟೆ ಚೆಸ್ ಅಭ್ಯಾಸ ನಡೆಸುವ ಆಕೆ, ಕಠಿಣ ಪರಿಶ್ರಮಿ. ಪ್ರಗ್ಗು ಆಡಲು ಶುರುಮಾಡಿದ ಮೇಲೆ ಅಕ್ಕನಿಗಿಂತ ಕ್ಷಿಪ್ರಗತಿಯಲ್ಲಿ ಬೆಳವಣಿಗೆ ಹೊಂದಿ, ಗ್ರ್ಯಾಂಡ್ ಮಾಸ್ಟರ್ ಪಟ್ಟವನ್ನು ಮೊದಲು ಒಲಿಸಿಕೊಂಡರೆ, ವೈಶಾಲಿ ತಮ್ಮನನ್ನು ಹಿಂಬಾಲಿಸಿದ್ದಾರೆ.

ವೈಶಾಲಿ ತಮ್ಮ ಇದುವರೆಗಿನ ಚೆಸ್ ಯಾತ್ರೆಯಲ್ಲಿ ಹತ್ತು ಹಲವು ಪ್ರಶಸ್ತಿಗಳನ್ನು ಬಾಚಿಕೊಂಡಿದ್ದಾರೆ. 2012ರಲ್ಲೇ ವಿಶ್ವ 12 ವರ್ಷದೊಳಗಿನವರ ಚೆಸ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದ ಅವರು, 2015ರಲ್ಲಿ ವಿಶ್ವ 12 ವರ್ಷದೊಳಗಿನವರ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಬಾಚಿದ್ದರು. ಅಂತರರಾಷ್ಟ್ರೀಯ ಮಟ್ಟದ ಹಲವು ಚೆಸ್ ಟೂರ್ನಿಗಳಲ್ಲಿ ಭಾರತವನ್ನು ಪ್ರತಿನಿಧಿಸಿರುವ ಅವರು, ದೇಶವು ಹಲವು ಸ್ವರ್ಣ ಪದಕಗಳನ್ನು ಗೆಲ್ಲುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.

ವಿಶ್ವನಾಥನ್ ಆನಂದ್ ಅವರ ಪ್ರಭಾವದಿಂದಲೋ ಏನೋ ತಮಿಳುನಾಡಿನಲ್ಲೇ ಹೊಸ ಹೊಸ ಚೆಸ್ ತಾರೆಗಳು ಉದಯಿಸುತ್ತಿದ್ದಾರೆ. ದೇಶದ ಚೆಸ್ ರಂಗದಲ್ಲಿ ಸದ್ಯ ಮಿಂಚುತ್ತಿರುವ ಚೆಸ್ ಆಟಗಾರರಲ್ಲಿ ಬಹುತೇಕರು ಅದೇ ರಾಜ್ಯಕ್ಕೆ ಸೇರಿದವರಾಗಿದ್ದಾರೆ. ವೈಶಾಲಿ ಸಾಧನೆ ಆನಂದ್ ಅವರಿಗೂ ಖುಷಿ ಕೊಟ್ಟಿದೆ. 'ಕಠಿಣ ಪರಿಶ್ರಮಕ್ಕೆ ಸೂಕ್ತ ಸಮ್ಮಾನ ದಕ್ಕಿದೆ. ಕಳೆದ ಐದು ತಿಂಗಳಿನಿಂದ ವೈಶಾಲಿ ಸಿಕ್ಕಾಪಟ್ಟೆ ಶ್ರಮ ಹಾಕಿದ್ದಳು. ಅದೀಗ ಫಲ ಕೊಟ್ಟಿದೆ. ಅವಳಿಗೆ ಅಭಿನಂದನೆಗಳು' ಎಂದು ಆನಂದ್ ಹೇಳಿದ್ದಾರೆ.

ಚೆಸ್ ಏನೂ ಇತರ ಕ್ರೀಡೆಗಳಂತಲ್ಲ. ಉಳಿದ ಆಟಗಳು ದೈಹಿಕ ಕಸರತ್ತನ್ನು ಹೆಚ್ಚಾಗಿ ಬಯಸಿದರೆ, ಚೆಸ್ ಆಟಕ್ಕೆ ಏಕಾಗ್ರತೆ ಬೇಕು. ಅಂತಹ ಏಕಾಗ್ರತೆಯನ್ನು ತಮ್ಮದಾಗಿಸಿಕೊಂಡಿರುವ ಚೆನ್ನೈನ ಚೆಸ್ ತಾರೆಯರು ದೊಡ್ಡ ದೊಡ್ಡ ಸಾಧನೆ ಮಾಡುತ್ತಾ, ಜಾಗತಿಕ ಮಟ್ಟದಲ್ಲಿ ದೊಡ್ಡದಾಗಿ ದಾಪುಗಾಲು ಹಾಕುತ್ತಿದ್ದಾರೆ. ಹುಡುಗರೇ ಹೆಚ್ಚಾಗಿದ್ದಾರೆ. ಹುಡುಗಿಯರು ಚೆಸ್‌ನಲ್ಲಿ ಆ ಮಟ್ಟದಲ್ಲಿ ಮಿಂಚುತ್ತಿಲ್ಲ ಎಂಬ ಕೊರಗು ಈ ವಲಯದಲ್ಲಿ ತೊಡಗಿಸಿಕೊಂಡವರನ್ನು ಕಾಡುತ್ತಿತ್ತು. ವೈಶಾಲಿ ಸಾಧನೆ ಆ ಕೊರಗನ್ನು ಮರೆಮಾಚಿಸಿದೆ.

ಚೀನಾದ ಡಿಂಗ್ ಲಿರೆನ್ ವಿಶ್ವ ಚಾಂಪಿಯನ್ ಆದಾಗ ಆನಂದ್ ಒಂದು ಮಾತನ್ನು ಹೇಳಿದ್ದರು. 'ನಮ್ಮ ಪಕ್ಕದ ದೇಶದವರು ಚಾಂಪಿಯನ್ ಆಗಿರುವುದು ನಮ್ಮ ಕೆಚ್ಚನ್ನು ಮತ್ತಷ್ಟು ಹೆಚ್ಚಿಸುವಂತೆ ಮಾಡಿದೆ. ಮುಂದಿನ ವರ್ಷ ಲಿರೆನ್‌ಗೆ ಭಾರತೀಯ ಎದುರಾಳಿಯೇ ಚೆಕ್‌ಮೇಟ್ ಮಾಡಬಹುದು. ಆ ಕ್ಷಣಕ್ಕಾಗಿ ಕಾಯೋಣ' ಎಂದು. ಭಾರತದಲ್ಲಿ ಹುಲುಸಾಗಿ ಬೆಳೆದಿರುವ ಚೆಸ್ ಪ್ರತಿಭೆಗಳ ಕಡೆಗೊಂದು ಇನ್ನಷ್ಟು ಸಾಧನೆಯ ಆಕಾಂಕ್ಷೆಯಿಂದ ಆಸೆಗಣ್ಣಿನ ನೋಟ ಬೀರಲು ವೈಶಾಲಿ, ಪ್ರಗ್ಗು, ಗುಕೇಶ್, ಅರ್ಜುನ್ ಅವರಂತಹ ಹತ್ತಾರು ಪ್ರತಿಭೆಗಳು ಈಗ ಅಲ್ಲಿವೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65